## ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಡಿ.ಎಸ್.ಅರುಣ್ ರವರು ನಿಯಮ 72ರ ಅಡಿಯಲ್ಲಿ ಕೇಳಲಾದ ಗಮನ ಸೆಳೆಯುವ ಸೂಚನೆಗೆ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರ ಹೇಳಿಕೆ.**

**ಸೂಚನೆ: ರಾಜ್ಯದಲ್ಲಿ ಹಾನಗಲ್ ತಾಲ್ಲೂಕು ಸೇರಿದಂತೆ ವಿವಿಧ ಗ್ರಾಮ ಪಂಚಾಯತಿಗಳಿಗೆ 2023-24 ಹಾಗೂ 2024-25ರಲ್ಲಿ ಕೇಂದ್ರ ಸರ್ಕಾರ ಬಿಡುಗಡೆಗೊಳಿಸುವ ಅನುದಾನದಲ್ಲಿ ರಾಜ್ಯ ಸರ್ಕಾರ ಅನುದಾನ ಹಂಚಿಕೆ ಹಾಗೂ ಬಿಡುಗಡೆಯಲ್ಲಿ ತಾರತಮ್ಯ ಮಾಡಿರುವ ಕುರಿತು ನಿಯಮ 72ರ ಅಡಿಯಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಗಮನ ಸೆಳೆಯಬಯಸುತ್ತೇನೆ.**

**ಉತ್ತರ:**ಭಾರತ ಸರ್ಕಾರದ ಪತ್ರ ಸಂಖ್ಯೆ: 15(2) F.C-XV/FCD/2025 ದಿನಾಂಕ:14.07.2021ರಲ್ಲಿ ನಿಗಧಿಪಡಿಸಿರುವಂತೆ ಕರ್ನಾಟಕ ರಾಜ್ಯಕ್ಕೆ 2024-25ನೇ ಸಾಲಿಗೆ 15ನೇ ಹಣಕಾಸು ಆಯೋಗದ ಅನುದಾನದಲ್ಲಿ ಒಟ್ಟು ರೂ.2637.00 ಕೋಟಿಗಳನ್ನು ನಿಗಧಿಪಡಿಸಿರುತ್ತದೆ. ಕರ್ನಾಟಕ ಸರ್ಕಾರವು ಆರ್ಥಿಕ ವರ್ಷದ ಪ್ರಾರಂಭದಲ್ಲಿ ಭಾರತ ಸರ್ಕಾರವು ನಿಗಧಿಪಡಿಸುವ ವಾರ್ಷಿಕ ಅನುದಾನವನ್ನು ಗ್ರಾಮ ಪಂಚಾಯತಿ/ತಾಲ್ಲೂಕು ಪಂಚಾಯತಿ/ಜಿಲ್ಲಾ ಪಂಚಾಯತಿಗಳಿಗೆ ಮರು ಹಂಚಿಕೆ ಮಾಡಿ ಆದೇಶ ಹೊರಡಿಸುತ್ತದೆ. 15ನೇ ಹಣಕಾಸು ಆಯೋಗದ ವಾರ್ಷಿಕ ಅನುದಾನದಲ್ಲಿ ಶೇ.85ರಷ್ಟನ್ನು ಗ್ರಾಮ ಪಂಚಾಯತಿಗಳಿಗೆ, ಶೇ.10ರಷ್ಟನ್ನು ತಾಲ್ಲೂಕು ಪಂಚಾಯತಿಗಳಿಗೆ ಮತ್ತು ಶೇ.5ರಷ್ಟು ಅನುದಾನವನ್ನು ಜಿಲ್ಲಾ ಪಂಚಾಯತಿಗಳಿಗೆ ನಿಗಧಿಪಡಿಸಲಾಗುತ್ತಿದೆ.

ಭಾರತ ಸರ್ಕಾರದ 15ನೇ ಹಣಕಾಸು ಆಯೋಗದ ಮಾರ್ಗಸೂಚಿಯ ಪ್ರಕಾರ ಗ್ರಾಮ ಪಂಚಾಯತಿಗಳ ನಡುವೆ ಅನುದಾನವನ್ನು ಶೇ.90ರಷ್ಟು ಜನಸಂಖ್ಯೆಯ ಆಧಾರದ ಮೇಲೆ ಶೇ.10ರಷ್ಟು ಭೌಗೋಳಿಕ ವಿಸ್ತೀರ್ಣದ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತಿದೆ. ಈ ಸಂಬಂಧವಾಗಿ 2024-25ನೇ ಸಾಲಿನಲ್ಲಿ ಆಯುಕ್ತಾಲಯದ ಮಾರ್ಗಸೂಚಿಯ ಸಂಖ್ಯೆ:ಕಪಂರಾಅ/ಅಭಿವೃದ್ಧಿ/580/2024 ದಿನಾಂಕ:27.09.2024ರಲ್ಲಿ ಗ್ರಾಮ ಪಂಚಾಯತಿಗಳಿಗೆ 2024-25ನೇ ಸಾಲಿನ ಅನುದಾನವನ್ನು ಹಂಚಿಕೆ ಮಾಡಿ ಆದೇಶ ಹೊರಡಿಸಲಾಗಿರುತ್ತದೆ. ಕರ್ನಾಟಕದಲ್ಲಿ 5950 ಗ್ರಾಮ ಪಂಚಾಯತಿಗಳಿದ್ದು, ಇವುಗಳ ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತೀರ್ಣವನ್ನು ಡೌನ್‌ಲೋಡ್ ಮಾಡುವಾಗ ತಾಂತ್ರಿಕ ದೋಷದಿಂದಾಗಿ ಕೆಲವು ಗ್ರಾಮ ಪಂಚಾಯತಿಗಳ ಜನಸಂಖ್ಯೆಯು ದ್ವಿಗುಣವಾಗಿ ತೋರಿಸಿರುತ್ತದೆ. ಇದರಿಂದಾಗಿ ಕೆಲವು ಗ್ರಾಮ ಪಂಚಾಯತಿಗಳಿಗೆ ಹೆಚ್ಚುವರಿಯಾಗಿ ಮತ್ತು ಕೆಲವು ಗ್ರಾಮ ಪಂಚಾಯತಿಗಳಿಗೆ ಕಡಿಮೆ ಹಂಚಿಕೆಯನ್ನು ತೋರಿಸಲಾಗಿರುತ್ತದೆ. ತಾಂತ್ರಿಕ ದೋಷದಿಂದಾಗಿರುವಂತಹ ತಪ್ಪನ್ನು ಗಮನಿಸಿದ ಆಯುಕ್ತಾಲಯವು ತನ್ನ ಪತ್ರದ ಸಂಖ್ಯೆ: ಕಪಂರಾಅ/ಅಭಿವೃದ್ಧಿ/580/2024 ದಿನಾಂಕ:26.11.2024ರಲ್ಲಿ ವಾರ್ಷಿಕ ಹಂಚಿಕೆಯನ್ನು ತಿದ್ದುಪಡಿ ಮಾಡಿ ಪರಿಷ್ಕೃತ ಹಂಚಿಕೆಯನ್ನು ಹೊರಡಿಸಿರುತ್ತದೆ.

ರಾಜ್ಯ ಸರ್ಕಾರವು ಅನುದಾನ ಹಂಚಿಕೆಯಲ್ಲಾಗಲಿ, ಬಿಡುಗಡೆಯಲ್ಲಾಗಲಿ ತಾರತಮ್ಯ ಮಾಡಿರುವುದಿಲ್ಲ ಮೇಲಾಗಿ ತಪ್ಪಾಗಿ ಹಂಚಿಕೆ ಮಾಡಿದಂತಹ ಆದೇಶದ ಆಧಾರದ ಮೇಲೆ ಅನುದಾನವನ್ನು ಬಿಡುಗಡೆ ಮಾಡಿರುವುದಿಲ್ಲ. ಆದ್ದರಿಂದ, ಬಿಡುಗಡೆಯಲ್ಲಿ ಯಾವುದೇ ರೀತಿಯ ತಾರತಮ್ಯವಾಗಲಿ, ತಪ್ಪಾಗಲಿ ಆಗಿರುವುದಿಲ್ಲವೆಂದು ತಿಳಿಸಿದೆ.

**ಸಂಖ್ಯೆ:ಗ್ರಾಅಪಂರಾ 27 ಜಿಪಸ 2025**

(ಪ್ರಿಯಾಂಕ್ ಖರ್ಗೆ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್

ಹಾಗೂ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು.